(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರರವರ ನ್ಯಾಯಾಲಯ ಹೊಸಪೇಟೆ

ಸಂ/ಕಂ/ಪಹಣಿ ಅಪೀಲು/54/2016-17 ದಿನಾಂಕ:28.09.2016.

## ಹಿಂಬರಹ

ವಿಷಯ: ಕೂಡ್ಲಿಗಿ ತಾಲೂಕು ಕೊಟ್ಟೂರು ಹೋಬಳಿ ಕೊಟ್ಟೂರು ಗ್ರಾಮದ ಸ.ನಂ.523/3 ವಿಸ್ತೀರ್ಣ: 00 ಎಕರೆ 11 ಸೆಂಟ್ಸ್; ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೊಟ್ಟೂರು ಇವರ ಹಕ್ಕುಬದಲಾವಣೆ ಆದೇಶ ಸಂಖ್ಯೆ:114/2010-11 ದಿನಾಂಕ:10.01.2011 ರ ಆದೇಶದ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ.

ಉಲ್ಲೇಖ: ಶ್ರೀ ಕೆ.ಎಂ.ಸದಾಶಿವಯ್ಯ, ವಕೀಲರು, ಹೊಸಪೇಟೆ ಇವರ ಮೇಲ್ಮನವಿ ದಿನಾಂಕ: 26.09.2016.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಮನವಿಯಲ್ಲಿ ಕೋರಿರುವ ಮೇರೆಗೆ ಕೂಡ್ಲಿಗಿ ತಾಲೂಕು ಕೊಟ್ಟೂರು ಹೋಬಳಿ ಕೊಟ್ಟೂರು ಗ್ರಾಮದ ಸ.ನಂ.523/3 ವಿಸ್ತೀರ್ಣ: 00 ಎಕರೆ 11 ಸೆಂಟ್ಸ್; ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕೊಟ್ಟೂರು ಇವರ ಹಕ್ಕುಬದಲಾವಣೆ ಆದೇಶ ಸಂಖ್ಯೆ:114/2010-11 ದಿನಾಂಕ:10.01.2011 ವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೀರಿ.

ಸದರಿ ಅಪೀಲಿನಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು ಹಕ್ಕುಬದಲಾವಣೆ ಆದೇಶ ಸಂಖ್ಯೆ:114/2010-11 ದಿನಾಂಕ:10.01.2011 ರಲ್ಲಿ ದಿನಾಂಕ:5.02.65 ರಲ್ಲಿ ಮಾಡಿಕೊಂಡ ಪಾಲುವಿಭಾಗ ಡಾ.ನಂ.310/65 ರ ಪ್ರಕಾರ ಸೋಮಶಾಂತಯ್ಯ ಭಾಗಕ್ಕೆ ಬಂದಿರುತ್ತಾರೆ. ಸೋಮಶಾಂತಯ್ಯ ಇವರು ಪೋತಿ ಇವರ ಮಗ ಅಟವಾಳ್ಗಿ ಶ್ರೀಧರ ತಂದೆ ಲೇಟ್ ಸೋಮಶಾಂತಯ್ಯ, ಕೊಟ್ಟೂರು ಇವರ ಹೆಸರಿಗೆ ಆದೇಶವಾಗಿದ್ದು, ಮುಂದುವರೆದು, ಶ್ರೀ ಅಟವಾಳಗಿ ಶೀಧರ ತಂದೆ ಅಟವಾಳಗಿ ಸೋಮಶಾಂತಯ್ಯ ಇವರು ಶ್ರೀಮತಿ ಲತಾವರಮ್ ಪಾರ್ವತಮ್ಮ ಗಂಡ ವೀರಭದ್ರಪ್ಪ ಇವರಿಗೆ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:4281 ದಿನಾಂಕ:07.03.2014 ರಂದು ಕ್ರಯಕ್ಕೆ ನೀಡಿದ್ದು, ತದನಂತರದಲ್ಲಿ ಶ್ರೀಮತಿ ಲತಾವರಮ್ ಪಾರ್ವತಮ್ಮ ಗಂಡ ವೀರಭದ್ರಪ್ಪ ಇವರು ಕೆ.ಅನಿತ ಗಂಡ ಕೆ.ರವಿ ಇವರಿಗೆ ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ:3010 ದಿನಾಂಕ:24.11.2014 ರಂದು ದಾನ ನೀಡಿದ್ದು, ಆ ಪ್ರಕಾರವಾಗಿ ಎಂ.ನಂ.ಹೆಚ್.53/2014-15 ದಿನಾಂಕ:17.01.2015 ರಂದು ಕೆ.ಅನಿತ ಗಂಡ ಕೆ.ರವಿ ಇವರ ಹೆಸರಿಗೆ ಸ.ನಂ.523/ಎ3 ವಿಸ್ತೀರ್ಣ: 00 ಎಕರೆ 11 ಸೆಂಟ್ಸ್; ಜಮೀನು ಹಕ್ಕು ಬದಲಾವಣೆ ಆಗಿದ್ದು, ಪಹಣಿಯಲ್ಲಿ ಇವರ ಹೆಸರು ನಮೂದಾಗಿರುವುದು ಕಂಡುಬಂದಿರುತ್ತದೆ.

ಆದರೆ, ತಮ್ಮ ಅಪೀಲಿನಲ್ಲಿ ಹಕ್ಕುಬದಲಾವಣೆ ಆದೇಶ ಸಂಖ್ಯೆ:114/2010-11 ದಿನಾಂಕ:10.01.2011 ವನ್ನು ರದ್ದುಪಡಿಸಿ ವಾದಿಯಾದ ಜಿ.ಎಂ.ಅನ್ನಪೂರ್ಣಮ್ಮ ಗಂಡ ಗಂಗಾಧರಯ್ಯ ಇವರ ಹೆಸರಿಗೆ ಮಾಡಲು ಕೋರಿರುತ್ತೀರಿ. ಆದರೆ, ಪ್ರಕರಣ ಪರಿಶೀಲಿಸಲಾಗಿ, ಇದರ ನಂತರದಲ್ಲಿ ಎರಡು ಬಾರಿ ನೋಂದಾಯಿತ ದಸ್ತಾವೇಜು ಪ್ರಕಾರ ವಹಿವಾಟು ಅಗಿರುತ್ತದೆ. ಆ ಪ್ರಕಾರವಾಗಿ ಹಕ್ಕು ಬದಲಾವಣೆಯೂ ಸಹ ಆಗಿದ್ದು, ಸದರಿ ನೋಂಧಾಯಿತ ದಸ್ತಾವೇಜುಗಳ ಪ್ರಕಾರ ಹಕ್ಕು ಬದಲಾವಣೆ ಆಗಿದ್ದು, ಈ ಬಗ್ಗೆ ಈ ನ್ಯಾಯಾಲಯದಲ್ಲಿ ಕ್ರಮ ಕೈಗೊಳ್ಳುವ ಅವಶ್ಯಕತೆ ಇಲ್ಲದ ಕಾರಣ ಸದರಿ ಮೇಲ್ಮನವಿಯು ಸಿವಿಲ್ ಸ್ವರೂಪದ್ದಾಗಿದ್ದು, ಹಾಗೂ ಸದರಿ ನೋಂದಾಯಿತ ದಾಖಲೆಯ ನೈಜತೆಯನ್ನು ನಿರ್ಣಯಿಸುವ ಅಧಿಕಾರ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಮಾತ್ರ ಇದ್ದು, ಈ ಬಗ್ಗೆ ತಾವುಗಳು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಸೂಚಿಸಿ, ಸದರಿ ಪ್ರಕರಣವನ್ನು ಇದೇ ಹಂತದಲ್ಲಿ ವಿಲೇಗೊಳಿಸಲಾಗಿದೆ.

ಸಹಾಯಕ ಆಯುಕ್ತರು,
ಹೊಸಪೇಟೆ.

ಇವರಿಗೆ,

1. ಶ್ರೀ ಕೆ.ಎಂ.ಸದಾಶಿವಯ್ಯ, ವಕೀಲರು, ಹೊಸಪೇಟೆ